**MVC-1052/2024** **ಪಿ.ಡಬ್ಲ್ಯೂ-1 (ರಂಜಿತ)**

ದಿನಾಂಕಃ **10.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎಸ್.ವಿ. ವಕೀಲರಿಂದಃ</u>**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತವನ್ನು ಯಾರು ನನಗೆ ಹೇಳಿರುತ್ತಾರೆ ಎಂದು ಗೊತ್ತಿಲ್ಲ. ಬೆಳಗೊಳದಿಂದ ನನ್ನ ಗಂಡನನ್ನು ಕರೆದುಕೊಂಡು ಕೆ.ಆರ್.ಎಸ್. ಆಸ್ಪತ್ರೆಗೆ ಹೋಗಿರುತ್ತೇನೆ. ಕೆ.ಆರ್.ಎಸ್. ಆಸ್ಪತ್ರೆಯಿಂದ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ನಾಲ್ಕು ದಿನ ಇದ್ದೆವು. ಆ ಸಂದರ್ಭದಲ್ಲಿ ನನ್ನ ಗಂಡ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಅಪಘಾತ ನಡೆದ ದಿನವೇ ಹೇಗೆ ಆಯಿತು ಎಂದು ನನಗೆ ಗೊತ್ತಾಯಿತು.

2. ನನ್ನ ಗಂಡ 3 ಅಥವಾ 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರಬಹುದು. ನನ್ನ ಗಂಡನ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಈಗಲೂ ಇದೆ. ಅವುಗಳನ್ನು ಹಾಜರುಪಡಿಸಲು ಅಡ್ಡಿ ಇಲ್ಲ.

3. ಅಪಘಾತ ಕಾಲಕ್ಕೆ ನನ್ನ ಗಂಡನಿಗೆ ಸುಮಾರು 50 ವರ್ಷ ಮೇಲ್ಪಟ್ಟಿತ್ತು ಎಂದು ಸೂಚಿಸುವುದು ಸರಿಯಲ್ಲ. ಹೆಚ್ಚು ಪರಿಹಾರ ಪಡೆಯಲು ಗಂಡನ ವಯಸ್ಸನ್ನು ಅರ್ಜಿಯಲ್ಲಿ ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಧಾರ್ಮಿಕ ಕಾರ್ಯ, ಶವಸಂಸ್ಕಾರ ಮತ್ತು ಶವ ಸಾಗಾಣಿಕೆಗೆ, ಆಸ್ಪತ್ರೆಯ ಖರ್ಚು ಇತ್ಯಾದಿಗೆಂದು ತೋರಿಸಿರುವ ಖರ್ಚುಗಳು ಸುಳ್ಳಿನಿಂದ ಕೂಡಿರುವುದು ಎಂದರೆ ಸರಿಯಲ್ಲ. ಆಸ್ಪತ್ರೆಗೆ ನಗದು ರೂಪದಲ್ಲಿ ಪಾವತಿ ಮಾಡಿರುತ್ತೇವೆ. ಆಸ್ಪತ್ರೆಯಲ್ಲಿ ಮೃತ ದೇಹ ಮನೆಗೆ ತಂದ ದಿನವೇ ಪಾವತಿ ಮಾಡಿರುತ್ತೇವೆ. ಆಸ್ಪತ್ರೆಯವರೊಂದಿಗೆ ಷರೀಕ್ಕಾಗಿ ಹಾಜರುಪಡಿಸಿರುವ ಔಷಧಿ ಬಿಲ್ಲುಗಳು

ಮತ್ತು ಚೀಟಿಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಉಳಿದ ಅರ್ಜಿದಾರರ ಆಧಾರ್ ಕಾರ್ಡ ಮತ್ತು ರೇಷನ್ ಕಾರ್ಡನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಅತ್ತೆ-ಮಾವ ಬೇರೆ ಬೇರೆ ರೇಷನ್ ಕಾರ್ಡ್ ಮಾಡಿಸಿಕೊಂಡಿರುತ್ತೇವೆ. ಅತ್ತೆ- ಮಾವ ಮತ್ತು ನಾವು ಬೇರೆ ಬೇರೆ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ.

4. ಹುಲಿಕೆರೆಯೆಂಬಲ್ಲಿ ಮಾಳಿಗೆಯನ್ನು ಬಾಡಿಗೆಗೆ ಪಡೆದುಕೊಂಡು ನನ್ನ ಗಂಡ ಸಲೂನ್ ಅಂಗಡಿ ನಡೆಸುತ್ತಿದ್ದರು. ಆತ ಯಾವುದೇ ಅಂಗಡಿ ನಡೆಸುತ್ತಿರಲಿಲ್ಲ, 23000 ರೂಪಾಯಿ ಆದಾಯ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ರತೀಶನಿಗೆ ಚಾಲನೆ ಪರವಾನಿಗೆ ಇರಲಿಲ್ಲ ಆತ ಮತ್ತು ನನ್ನ ಗಂಡ ಹೆಲ್ಮೆಟ್ ಧರಿಸದೇ ಚಾಲಕನ ಅಜಾಗರೂಕತೆಯಿಂದಲೇ ಖುದ್ದು ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**1 ನೇ ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ.,**

**ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**